ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

1) ಸರ್ಕಾರದ ಗಮನಕ್ಕೆ ಬಂದಿದೆ.

2) ಸದರಿ ರಸ್ತೆಗಳು ಹಾಳಾಗಿರುವುದರಿಂದ ಪವಿತ್ರ ದೇವಾಲಯವಾದ ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಹೋಗಲು ಸಾರ್ವಜನಿಕರಿಗೆ ಆಗುವ ಅನಾನುಕೂಲವನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿವರಗಳು ಈ ಕೆಳಕಂಡಂತಿದೆ :

1. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆ ಕಿಮೀ 7.50 ರಿಂದ 13.00 ವರೆಗೆ ಆಯ್ದ ಭಾಗದಲ್ಲಿ ಡಾಂಬರೀಕರಣ ಮಾಡಲು ರೂ. 15.00 ಲಕ್ಷದ ಮೊತ್ತದ ಕಾಮಗಾರಿಯನ್ನು ಮಳೆಗಾಲದ ನಂತರ ಸದ್ಯದಲ್ಲಿಯೇ ಪ್ರಾರಂಭಿಸಲಾಗುತ್ತದೆ.
2. ಜಾಲ್ಸೂರು ಸುಬ್ರಹ್ಮಣ್ಯ ರಸ್ತೆಗೆ ಕೆಲವು ಆಯ್ದ ಭಾಗಗಳಲ್ಲಿ ಚರಂಡಿಗಳನ್ನು ದುರಸ್ತಿ ಪಡಿಸಲು ಸಿಆರ್‌ಎಫ್, ಡಿಸಿ, ಗ್ರಾಂಟ್ಸ್ ಅಡಿಯಲ್ಲಿ 3.00 ಲಕ್ಷ ಅನುದಾನ ದೊರೆತಿದ್ದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.
3. ಯೋಜನೇತರ ಅನುದಾನದಲ್ಲಿ ಗುಂಡಿ ಮುಚ್ಚುವ ಕೆಲಸ ಕೈಗೊಂಡಿದೆ.

3) ರೂ. 47.754 ಲಕ್ಷ ಅನುದಾನ ಬಿಡುಗಡೆ ಮಾಡಿದೆ.

ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿರುವ ಅಭ್ಯರ್ಥಿಗಳ ವಿವರಗಳು

3089 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ ಎಷ್ಟು ? ಈ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿಯಾಗಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? ಪ್ರತ್ಯೇಕವಾಗಿ ವಿವರ ನೀಡುವುದು ?

ಆ) ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳಿಗೆ ಉದ್ಯೋಗ ವಿನಿಮಯ ಕೇಂದ್ರದ ಮುಖ್ಯಾಂತರ ಕಡ್ಡಾಯವಾಗಿ ನೇಮಕಾತಿ ಮಾಡಿಕೊಳ್ಳಬೇಕೆಂಬ ಷರತ್ತು ಹಿಂತೆಗೆದುಕೊಂಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಕೊಡಗು ಜಿಲ್ಲೆಯಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳ ಸಂಖ್ಯೆ.1, ಈ ಕಚೇರಿಯಲ್ಲಿ ನೋಂದಣಿಯಾಗಿರುವ ಅಭ್ಯರ್ಥಿಗಳ ಸಂಖ್ಯೆ. 15,084 (ಆಗಸ್ಟ್ 2000ದ ಅಂತ್ಯಕ್ಕೆ)

ಅ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮಡಿಕೇರಿಯಲ್ಲಿ ಆಗಸ್ಟ್ 20ರ ಅಂತ್ಯಕ್ಕೆ ನೋಂದಾಯಿಸಿದ ಅಭ್ಯರ್ಥಿಗಳ ವಿದ್ಯಾರ್ಹತೆವಾರು ವಿವರ.

1. ಪದವೀಧರರು :

(ಅ) ಶಿಕ್ಷಣ	340
(ಆ) ಕಲೆ	458
(ಇ) ವಿಜ್ಞಾನ	56
(ಈ) ವಾಣಿಜ್ಯ	442

2. ಡಿಪ್ಲೋಮಾದಾರರು :

(ಅ) ಸಿವಿಲ್	47
(ಆ) ಮೆಕ್ಯಾನಿಕಲ್	39
(ಇ) ಎಲೆಕ್ಟ್ರಿಕಲ್	39
(ಈ) ಎಲೆಕ್ಟ್ರಾನಿಕ್ಸ್	19
(ಉ) ಆಟೋಮೋಬೈಲ್	18
(ಊ) ಮೆಟಾಲರ್ಜಿ	-
(ಋ) ಮೈನಿಂಗ್	-
(ಋೂ) ಇತರೆ	43

3. ಐ.ಟಿ.ಐ : ಎ.ಟಿ.ಎಸ್ : ಸರ್ಟಿಫಿಕೇಟ್ ಪಡೆದವರು

(ಅ) ಫಿಟ್ಟರ್	81
(ಆ) ಟರ್ನರ್	63
(ಇ) ಮೆಷಿನಿಸ್ಟ್	42
(ಈ) ಎಲೆಕ್ಟ್ರಿಷಿಯನ್	56
(ಉ) ವೆಲ್ಡರ್	45
(ಊ) ವೈರ್‌ಮೆನ್	-
(ಋ) ಶೀಟ್ ಮೆಟಲ್ ವರ್ಕರ್	-
(ಋೂ) ಇತರೆ	107

4.	ಶೀಘ್ರಲಿಪಿಗಾರರು	25
5.	ಎಸ್.ಎಸ್.ಎಲ್.ಸಿ. ಪಾಸಾದವರು	10,264
6.	ಮಿಡ್ಲ್‌ಸ್ಕೂಲ್ ಪಾಸಾದವರು	1,739
7.	ಅಕ್ಷರಸ್ಥರು, ಅನಕ್ಷರಸ್ಥರು ಹಾಗೂ ಇತರರು	1,161
	ಒಟ್ಟು	**15,084**

ಕೇಂದ್ರ ಸರ್ಕಾರದಿಂದ 14 ಸಾವಿರ ಹೆಕ್ಟೇರ್ ಭಾಗವನ್ನು ಅರಣ್ಯ ಇಲಾಖೆಗೆ ಬಿಟ್ಟು ಕೊಡಲಾಗಿರುವ ಬಗ್ಗೆ

3090 - ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೇಂದ್ರ ಸರ್ಕಾರದಿಂದ 1400 ಹೆಕ್ಟೇರ್ ಜಾಗವನ್ನು ಅರಣ್ಯ ಇಲಾಖೆಗೆ ಪಡೆಯಲಾಗಿದೆಯೇ?

2) ಹಾಗಿದ್ದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟೆಷ್ಟು ಜಾಗವನ್ನು ಅರಣ್ಯ ಇಲಾಖೆಗೆ ಪಡೆಯಲಾಗಿದೆ?

3) ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಶಾಂತಳ್ಳಿ ಹೋಬಳಿ, ತೋಳೂರು ಶೆಟ್ಟಿಹಳ್ಳಿ ಇಲ್ಲಿ 1998ರ ಮೊದಲು ಎಷ್ಟು ಎಕರೆ ಜಾಗವನ್ನು ಸಿ ಮತ್ತು ಡಿ ಲ್ಯಾಂಡ್ ಎಂದು ಘೋಷಣೆ ಮಾಡಲಾಗಿದೆ. ಈ ಜಾಗ ಈಗಲೂ ಸರ್ಕಾರದ ವಶದಲ್ಲಿಯೇ? ಖಾಸಗಿಯವರಿಗೆ ಈ ಜಾಗದ ಪಟ್ಟಿ ವಿತರಣೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ಯಾರಿಗೆ ಮಂಜೂರು ಮಾಡಲಾಗಿದೆ?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ) :

1) ಇಲ್ಲ.

2) ಉದ್ಭವಿಸುವುದಿಲ್ಲ.

3) ಸೋಮವಾರಪೇಟೆ ತಾಲ್ಲೂಕು, ಶಾಂತಹಳ್ಳಿ ಹೋಬಳಿ, ತೋಳೂರು ಶೆಟ್ಟಿಹಳ್ಳಿಯಲ್ಲಿ 289.90 ಎಕರೆ ಸಿ ಮತ್ತು ಡಿ ದರ್ಜೆ ಜಮೀನು ಗುರುತಿಸಲ್ಪಟ್ಟಿರುತ್ತದೆ.

ಈ ಜಾಗವು ಕಂದಾಯ ಇಲಾಖೆಯ ವಶದಲ್ಲಿದೆ. ಖಾಸಗಿಯವರಿಗೆ ಪಟ್ಟಿ ವಿತರಣೆಯನ್ನು ಅರಣ್ಯ ಇಲಾಖೆಯಿಂದ ಮಾಡಿರುವುದಿಲ್ಲ.